MR. SPEAKER.—We shall take up this matter on Monday

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈ ಪ್ರಶ್ನೆ ಬಹಳ ಡೆಲಿಕೇಟ್ ಆಗಿರತಕ್ಕಂಥ ಪ್ರಶ್ನೆಯಾಗಿರುತ್ತದೆ. ಮಾನ್ಯ ಫರ್ನಾಂಡೀಸ್ ರವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಅವರು ನಾವು ಮಂತ್ರಿಗಳ ಹತ್ತಿರ ಹೋಗಿ ಡಿಸ್‌ಕಷನ್ ಮಾಡೋಣವೆಂದು ಹೇಳುತ್ತೇನೆ. ಏತಕ್ಕೆಂದರೆ ನಾನೂ ಕೂಡ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯನಾಗಿರುವುದರಿಂದ ಈ ಸದನದಲ್ಲಿ ಡಿಸ್‌ಕಸ್ ಮಾಡುವುದಕ್ಕೆ ಬದಲು ಮಂತ್ರಿಗಳ ಚೇಂಬರ್‌ಗೆ ಹೋಗಿ ಡಿಸ್‌ಕಸ್ ಮಾಡಿದರೆ ಒಳ್ಳೆಯದೆಂದು ಭಾವಿಸುತ್ತೇನೆ.

SRI MICHAEL B. FERNANDES.—I would also request the Government to take a decision immediately and allow these 60 students to appear for the examination before any major calamity occurs on that front The Government has given affiliation by passing the University recommendation during the past. The Hon. Minister for Ecduation Sri G.B. Shankar Rao himself passed orders at the end of last year giving retrospective affiliation for a period of 8 years. Now, the question is to give affiliation for the current year. Is it because a minority community run institution, the college, is being harassed? Everyone is excited about this question.

MR. SPEAKER.—Why should you unnecessarily?

SRI MICHAEL B. FERNANDES.—Sir, three precious days, they are going to put in the mental tension.

MR. SPEAKER.—The Hon. Minister for Education has already said that he would make a written statement on Monday. You have agreed for it.

(ii) re.—Complaint filed by a CBI Officer about the snatching away of the briefcase containing the enquiry report against a Member of Parliament.

SRI S. R. BOMMAI.—Sir, I call the attention of the Hon. Chief Minister to the complaint filed by the C.B.I. Officer against a a Member of Parliament and a Minister about the snatching away of the briefcase containing the enquiry report against a Member of Parliament.

SRI R. GUNDU RAO (Chief Minister).—Sir, I wish to make the following statement ;

A.C B.I Officer who is camping in Bangalore gave a written complaint to the Opparpet Police Station on 20-7-1981 that a briefcase containing certain official records, a bank pass book, a railway warrant and some other items were missing from the car in which he had been travelling. A case was registered in the Opparpet Police Station in Crime No. 558/81 under Section 379 I.P.C. The matter is under investigation. There is no mention in the complaint

filed by the C.B.I. Officer of any Member of Parliament or any Minister.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಈ ವಿಚಾರವಾಗಿ ನಾನು ಎರಡು ದಿನಗಳ ಹಿಂದೆಯೇ ಈ ಸದನದಲ್ಲಿ ಪ್ರಶ್ನೆಯನ್ನು ಎತ್ತಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ ಸಿ.ಬಿ.ಐ. ಅಧಿಕಾರಿಗಳು ಈ ಘಟನೆಯ ಬಗ್ಗೆ, ವಿಚಾರಣೆಯ ಬಗ್ಗೆ ಬಂದಿರುವುದು ಗೊತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ಈಗ ಅವರು ಕೊಟ್ಟ ಉತ್ತರವನ್ನು ನೋಡಿದರೆ ಸಿ.ಬಿ.ಐ. ಅಧಿಕಾರಿಗಳು ಕಂಪ್ಲೇಂಟ್ ಕೊಟ್ಟಿದ್ದಾರೆ ಅದರಲ್ಲಿ ಈ ರಾಜ್ಯಕ್ಕೆ ಸಂಬಂಧಪಟ್ಟಂತೆ ಪ್ರಮುಖ ವ್ಯಕ್ತಿಗಳ ವಿಚಾರಣೆಗೆ ಸಂಬಂಧಪಟ್ಟಂಥ ಕಾಗದ ಪತ್ರಗಳು ಕಳುವಾಗಿವೆ ಎನ್ನುವ ಮಾತನ್ನು ಹೇಳಿದ್ದಾರೆಯೇ ಹೇಗೆ ಎನ್ನುವುದು ಅದು ಬಹಳ ಮುಖ್ಯ. ಪತ್ರಿಕೆಗಳಲ್ಲಿ ಬಂದಿರುವ ಹಾಗೆ ಇದು ಒಬ್ಬ ರಾಜ್ಯಸಭಾ ಸದಸ್ಯರ ಮತ್ತು ಒಬ್ಬ ಮಂತ್ರಿಯ ಬಗ್ಗೆ ವಿಚಾರಣೆಗೆ ಸಂಬಂಧಿಸಿದಂತೆ ಕಾಗದ ಪತ್ರಗಳು ಇದ್ದುವು ಎನ್ನುವ ಮಾತು ಬಂದಿದೆ. ಕಂಪ್ಲೈಂಟ್‌ನಲ್ಲಿ ಡಿಟೈಲ್ಸ್ ಇದ್ದರೆ ಅದು ಬಹಳ ಮಹತ್ವದ್ದು ಇದೆ. ತಾವು ಹೇಳಬೇಕು ಇಲ್ಲದಿದ್ದರೆ ಸಂಶಯಕ್ಕೆ ಆಸ್ಪದವಾಗುತ್ತದೆ. ಇನ್ನೊಂದು ಪ್ರಶ್ನೆ ಉದ್ಭವವಾಗುತ್ತದೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಗೊತ್ತಿಲ್ಲವೆಂದು ಹೇಳಿದ್ದರಲ್ಲಿ ಅದಕ್ಕಿಂತ ಮೊದಲೇ ಕಂಪ್ಲೈಂಟ್ ಫೈಲ್ ಆಗಿದೆ. ೨೦ನೇ ತಾರೀಖೇ ಫೈಲ್ ಆಗಿದೆ. ಇದು ತಾವು ಇಲ್ಲಿ ಹೆಸರಿಸಿದಂತೆ ಒಬ್ಬ ರಾಜ್ಯಸಭಾ ಸದಸ್ಯರ ಬಗ್ಗೆ ಮತ್ತು ಒಬ್ಬ ಮಂತ್ರಿಯ ಬಗ್ಗೆ ಕಂಪ್ಲೈಂಟ್ ಇದೆ. ಸರ್ಕಾರ ಅದರಲ್ಲೂ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ತಪ್ಪುದಾರಿಗೆ ಎಳೆದರು ಎನ್ನುವ ಆಪಾದನೆಗೆ ಒಳಗಾಗಬೇಕಾಗುತ್ತದೆ.

೧೦–೩೦ ಎ. ಎಂ.

SRI R. GUNDU RAO.– The entire complaint is here and there is no mention of any such things ಆದರ ಒಂದು ಪ್ರತಿ ಇಲ್ಲಿ ಇದೆ. ಬೇಕಾದರೆ ನಾನು ತಮ್ಮ ಬಳಿಗೆ ಇದನ್ನು ಕಳುಹಿಸಿಕೊಡುತ್ತೇನೆ. ಅವರು ತಮ್ಮ ದೂರಿನಲ್ಲಿ ಯಾವ ಮಂತ್ರಿಯ ಹೆಸರನ್ನಾಗಲೀ ಯಾವ ರಾಜ್ಯ ಸಭಾ ಸದಸ್ಯರ ಹೆಸರನ್ನಾಗಲೀ ತಿಳಿಸಿರುವುದಿಲ್ಲ. ಆದುದರಿಂದ ಪತ್ರಿಕೆಗಳಲ್ಲಿ ಏನು ಬಂದಿದೆ ಅದು ತೀರಾ ಅಸತ್ಯ. ಅದನ್ನು ತಾವು ನಂಬಬೇಕಾಗಿಲ್ಲ ಎಂದು ಹೇಳುತ್ತೇನೆ. ನಾನು ಆಗಲೇ ಹೇಳಿದ ಹಾಗೆ ಸಿ.ಬಿ.ಐ. ಅಧಿಕಾರಿಗಳು ಯಾವ ವಿಚಾರಕ್ಕೆ ಬಂದರು ಎಂದು ಗೊತ್ತಿಲ್ಲ. ಹಿಂದಿನ ಸರ್ಕಾರ ಇದ್ದಾಗ ಅವರ ಒಂದು ಅಧಿಕಾರವನ್ನು ಕಸಿದುಕೊಂಡಿತ್ತು. ಯಾವುದೇ ವಿಚಾರಕ್ಕೆ ಅವರು ಬಂದರೂ ರಾಜ್ಯ ಸರ್ಕಾರದಿಂದ ಕನ್‌ಸೆಂಟ್ ತೆಗೆದುಕೊಂಡು ಅವರು ಮುಂದುವರಿಯಬೇಕಾಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ಆ ಒಂದು ನಿಯಮವನ್ನು ತೆಗೆದುಹಾಕಿದ್ದೇವೆ. ಆ ಬಗ್ಗೆ ಹೆದರಿಕೆ ಇದ್ದವರು ಆ ರೀತಿ ಕಾನೂನು ಮಾಡಿಕೊಂಡಿದ್ದು ನಾವು ಯಾರು ಯಾವಾಗ ಬೇಕಾದರೂ ಬಂದು ಹೋಗಲಿ ನಮಗೆ ಭಯವಿಲ್ಲ. ಆ ಪ್ರಕಾರ ಅವರು ಯಾವಾಗಲೋ ಬರುತ್ತಾರೆ ಯಾವಾಗಲೋ ಹೋಗುತ್ತಾರೆ. ಅವರು ಕೊಟ್ಟಿರುವ ದೂರಿನ ಪ್ರಕಾರ ಸಮ್ ರೆಕಾರ್ಡ್ಸ್, ಬ್ಯಾಂಕ್ ಪಾಸ್ ಬುಕ್ ಹಾಗೂ ರೈಲ್ವೇ ವಾಚರ್ ಕಳುವಾಗಿವೆ ಎಂದು ಹೇಳಿದ್ದಾರೆ. ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಅದನ್ನು ರಿಜಿಸ್ಟರ್ ಮಾಡಿಕೊಂಡಿದ್ದೇವೆ. These are all the facts.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಅಧಿಕಾರಿಗಳು ನಿರ್ಭಯವಾಗಿ ಇಲ್ಲಿ ತಪಾಸಣೆ ಮಾಡುವ ಬಗ್ಗೆ ಏನು ಕನ್ಸೆಂಟ್ ಕೊಟ್ಟಿದ್ದೀರಿ ಅದಕ್ಕೆ ಅಂಜಿಕೊಂಡಿಲ್ಲವೆಂದು ಹೇಳಿದಿರಿ.

ಶ್ರೀ ಆರ್. ಗುಂಡೂರಾವ್.—ನಾವು ಒಳ್ಳೆಯದನ್ನು ಮಾಡಿದ್ದೇವೆ. ಅದನ್ನು ನೀವು ಅಪ್ರಿಶಿಯೇಟ್ ಮಾಡುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಅದಕ್ಕೆ ಆಪ್ರಿಶಿಯೇಟ್ ಮಾಡುತ್ತಿದ್ದೇವೆ. In fact this is of absolute necessity in a federal structure. ಈ ಒಂದು ಕನ್‌ಸಲ್ಟ್ ಮಾಡುವ ಬಗ್ಗೆ ನಾವು ಹಿಂದಿನ ಸರ್ಕಾರದ ಜೊತೆ ಕೂಡಾ ಆಗ ವಾದ ಮಾಡಿದ್ದೇವೆ. ಆ ಬಗ್ಗೆ ಚರ್ಚೆ ಮಾಡಿದ್ದೇವೆ. ಆದರೆ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು, ಸಿ.ಬಿ.ಐ. ಅಧಿಕಾರಿಗಳು ಬರಲಿ, 'ರಾ' ಅಧಿಕಾರಿಗಳು ಬರಲಿ ಅವರು ನಮ್ಮ ಸ್ಥಾನಿಕ

ಪೋಲೀಸ್ ಅಧಿಕಾರಿಗಳ ಸಹಾಯ ಇಲ್ಲದೇ ಅವರು ವಿಚಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಆ ಅಧಿಕಾರಿಗಳು ಇಲ್ಲಿಗೆ ಬಂದ ಮೇಲೆ ಸ್ಥಾನಿಕ ಪೋಲೀಸ್ ಅಧಿಕಾರಿಗಳ ಮುಖಾಂತರ ಯಾವ ಪೋಲೀಸ್ ಠಾಣೆಗಳಲ್ಲಿ ವಿಚಾರಣೆ ಮಾಡಿದ್ದಾರೆ ? ಸಿ.ಬಿ.ಐ ನವರೇ ಇರಬಹುದು 'ರಾ' ದವರೇ ಇರಬಹುದು, ನಮ್ಮ ರಾಜ್ಯಕ್ಕೆ ಬಂದ ಮೇಲೆ ಇಲ್ಲಿಯ ಪೋಲೀಸ್ ಕಮಿಷನರು ಅವರನ್ನಾಗಲೀ, ಐ.ಜಿ.ಪಿ. ಯವರನ್ನಾಗಲೀ ಭೇಟಿಯಾಗಿ ಅವರ ಸಹಾಯದಿಂದ ಸಬ್ ಇನ್ಸ್‌ಪೆಕ್ಟರ್ ಅಥವಾ ಎಸ್.ಪಿ. ಅವರ ಸಹಾಯವನ್ನು ಪಡೆದು ಒಂದು ಕೇಸಿನ ಬಗ್ಗೆ ವಿಚಾರಣೆ ಮಾಡುತ್ತಾರೆ. ಇದನ್ನು ನಾವು ತಿಳಿದು ಕೊಂಡಿದ್ದೇವೆ. ಗ್ರೋವರ್ ಕಮಿಷನ್ ನಡೆಯುತಕ್ಕ ಕಾಲದಲ್ಲಿ ಸಿ.ಬಿ.ಐ. ಅಧಿಕಾರಿಗಳು ಯಾವ ರೀತಿ ಕೆಲಸ ಮಾಡಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಈ ಅಧಿಕಾರಿಗಳು ನಮ್ಮ ಸ್ಥಾನಿಕ ಅಧಿಕಾರಿಗಳ ಮುಂದೆ ವಿಚಾರಣೆ ಮಾಡುತ್ತಾರೆ. ಅದೇ ರೀತಿ ಇವರೂ ಸಹ ಸ್ಥಾನಿಕ ಅಧಿಕಾರಿಗಳ ಸಹಾಯವನ್ನು ಪಡೆದಿರಲೇಬೇಕು. ಹಾಗೆ ಸಹಾಯ ಪಡೆದಿರುವಾಗ ಯಾರು ಯಾರನ್ನು ಎಕ್ಸಾಮಿನ್ ಮಾಡಿದ್ದಾರೆ ? ನಾವು ಏನು ಒಂದು ಘಟನೆ ಬಗ್ಗೆ ಹೇಳಿದ್ದೇವೆ ಆದಕ್ಕೆ ಸಂಬಂಧಪಟ್ಟಂತೆ ಇವರು ವಿಚಾರಣೆಯನ್ನು ಮಾಡಿದ್ದಾರೆಯೇ ? ಇದೆಲ್ಲಾ ತಮ್ಮ ಸರ್ಕಾರಕ್ಕೆ ಗೊತ್ತಾಗುತ್ತದೆ. ಇದನ್ನು ತಾವು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಸಿ.ಬಿ.ಐ. ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಬಂದ ಸ್ಥಳೀಯವಾಗಿ ಯಾವ ಯಾವ ಪೋಲೀಸ್ ಅಧಿಕಾರಿಗಳ ಸಹಾಯ ಪಡೆದು ಏನೇನು ವಿಚಾರ ಮಾಡುತ್ತಾರೆ ಎನ್ನುವುದು ಪೂರ್ತಿ ಅವರಿಗೆ ಸಂಬಂಧಪಟ್ಟ ವಿಚಾರ. ಹಾಗೂ ಆ ವಿಷಯವನ್ನು ಅವರು ನಮಗೆ ತಿಳಿಸುವುದಿಲ್ಲ. ಅವರು ಗಟ್ಟಾಗಿ ಅವರ ನಿಯಮದ ಪ್ರಕಾರ ವಿಚಾರಣೆ ಮಾಡಿಕೊಂಡು ಹೋಗುತ್ತಾರೆ. ಅವರು ಕೇಂದ್ರಕ್ಕೆ ಹೋಗಿ ಅವರು ತನಿಖೆ ಮಾಡಿದ ಬಗ್ಗೆ ತಮ್ಮ ವರದಿಯನ್ನು ಅಲ್ಲಿ ಸಲ್ಲಿಸುತ್ತಾರೆ. ಅವರು ನಮ್ಮ ಸ್ಥಳೀಯ ಪೋಲೀಸ್ ಅಧಿಕಾರಿಗಳ ಸಹಾಯವನ್ನು ಪಡೆದುಕೊಂಡಿದ್ದರೆ, ಆ ವಿಷಯವನ್ನು ನಮ್ಮ ಪೋಲೀಸ್ ಅಧಿಕಾರಿಗಳು ನಮಗೆ ತಿಳಿಸಬೇಕಾಗಿಲ್ಲ. ಹಾಗೂ ನಮ್ಮ ಪೋಲೀಸ್ ಅಧಿಕಾರಿಗಳ ಜೊತೆ ಅವರು ಏನು ವ್ಯವಹಾರ ನಡೆಸಿದರು ಎಂಬ ಬಗ್ಗೆ ನಾವು ಕೇಳುವುದೂ ಸಹಾ ಉಚಿತವಲ್ಲ. ಹಾಗು ಅದು ಸರಿಯಾದುದೂ ಅಲ್ಲ. ಅವರು ಇಂಡಿಪೆಂಡೆಂಟಾಗಿ ವಿಚಾರಣೆ ಮಾಡಿಕೊಂಡು ಹೋಗಿ ಅವರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇಲೆ ಅವರು ನಮಗೆ ಅದನ್ನು ಕಳುಹಿಸಿಕೊಡುತ್ತಾರೆ ಆ ವರದಿ ಬಂದಾಗ ನಾನು ಅದನ್ನು ತಮ್ಮ ಮುಂದೆ ಇಡುತ್ತೇನೆ. ಆಗ ಯಾರು ಯಾರು ಏನೇನು ಸಾಕ್ಷಿ ಹೇಳಿದ್ದಾರೆ ಎಂಬುದು ತಮಗೇ ಗೊತ್ತಾಗುತ್ತದೆ. ಆ ಬಗ್ಗೆ ಕೇಂದ್ರದಿಂದ ವರದಿ ಬಂದ ಮೇಲೆ ನಾವು ವಿಚಾರಣೆ ಮಾಡುತ್ತೇವೆ. ಅವರ ಒಂದು ವಿಚಾರಣೆಯಲ್ಲಿ ನಾವು ಹಸ್ತಕ್ಷೇಪ ಮಾಡಬಾರದು. ಹಸ್ತಕ್ಷೇಪ ಮಾಡುವುದು ಉಚಿತವಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹಸ್ತಕ್ಷೇಪ ಮಾಡಬಾರದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ನಾವು ಏನು ನೋಟೀಸ್ ಕೊಟ್ಟಿದ್ದೇವೆ ಆ ವಿಚಾರದ ಬಗ್ಗೆ ಅವರು ಐ.ಜಿ.ಪಿ. ಯವರಿಗೆ ಹಾಗೂ ಸರ್ಕಾರದವರಿಗೆ ಏನಾದರೂ ವರದಿಯನ್ನು ಸಲ್ಲಿಸಿದ್ದಾರೆಯೇ ? ಪೋಲ್ಲೀಸ್ ಅಧಿಕಾರಿಗಳಿಗೆ ಅವರು ವರದಿಯನ್ನು ಸಲ್ಲಿಸಿದ್ದಾರೆಯೇ ? ಈ ಬಗ್ಗೆ ಎಸ್.ಪಿ. ಯವರಿಗೆ ಅವರು ವರದಿ ಸಲ್ಲಿಸಿದ್ದು ಅದನ್ನು ಎಸ್.ಪಿ. ಯವರು ಐ.ಜಿ.ಪಿ. ಯವರಿಗೆ ಸಲ್ಲಿಸಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಸರ್ಕಾರದ ಮಟ್ಟಿಗೆ ಯಾವ ವರದಿಯೂ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಾದರೆ ಐ.ಜಿ.ಪಿ. ಯವರಿಗೆ ಸಲ್ಲಿಸಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಅದು ಗೊತ್ತಿಲ್ಲದ ವಿಚಾರ. ಅದನ್ನು ವಿಚಾರ ಮಾಡುವುದೂ ಒಳ್ಳೆಯದಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ನಾವು ವಿಚಾರ ಮಾಡಬೇಕಾದ ವಿಷಯ. ನಮಗೆ ತಿಳಿದ ಪ್ರಕಾರ ಆ ಬಗ್ಗೆ ವರದಿ ಬಂದಿದೆ. ರಾಜ್ಯಸಭಾ ಸದಸ್ಯ ಶ್ರೀ ಎಫ್. ಎ. ಖಾನ್ ಅವರ ಘಟನೆ ಬಗ್ಗೆ ವರದಿ ಕೊಡಲಾಗಿದೆ ಎಂದು ನಾನು ಹೇಳುತ್ತೇನೆ.

SRI R. GUNDU RAO.—You are spoiling the whole case. Please leave it there. I am categorically denying that there is no such

complaint lodged by the C.B.I., about any Member of Parliament or any Minister. The reports are baseless and there is no truth in them There is nothing to be believed. What more do you want ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಮೊನ್ನೆ ಉತ್ತರವನ್ನು ಕೊಟ್ಟ ಮೇಲೆ ನಾವು ಆ ಬಗ್ಗೆ ಮುಂದುವರೆಸುವುದಕ್ಕೆ ಹೋಗಲಿಲ್ಲ. ಆದರೆ ಅದರ ನಂತರ ನಡೆದ ಘಟನೆಗಳ.....

SRI R. GUNDU RAO.—There is no question of any hearsay, There is no such thing and there is no complaint like that.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನಾನು ಒಪ್ಪುತ್ತೇನೆ. ತಾವು ಒಂದೇ ಮಾತಿನಲ್ಲಿ ಉತ್ತರ ಕೊಟ್ಟು ಸರ್ಕಾರದ ಹತ್ತಿರ ಆ ಬಗ್ಗೆ ವರದಿ ಇಲ್ಲ ಎಂದು ಹೇಳಿದಿರಿ. ಆಲ್ಲಿನ ಅಧಿಕಾರಿಗಳು ಬಂದು ಯಾವ ಘಟನೆ ಬಗ್ಗೆ ವಿಚಾರ ಮಾಡಿದರು, ಆ ಬಗ್ಗೆ ನಮ್ಮ ಪೋಲೀಸ್ ಅಧಿಕಾರಿಗಳಿಗೇ ಆಗಲೀ, ಪೋಲೀಸ್ ಕಮಿಷನರ್ ಅವರಿಗಾಗಲೀ ಅಥವಾ ಐ.ಜಿ.ಪಿ. ಯವರಿಗಾಗಲೀ ಏನಾದರೂ ವರದಿಯನ್ನು ಕೊಟ್ಟಿದ್ದಾರೆಯೇ ಎಂದು ಕೇಳಿದ್ದಕ್ಕೆ, ನನಗೆ ಗೊತ್ತಿಲ್ಲ ಎಂದು ಹೇಳಿದಿರಿ. ಇದರಲ್ಲೇ ಇದೆ ಗುಟ್ಟು, ನನ್ನ ಹೇಳಿಕೆ ಪ್ರಕಾರ, ಸಿ.ಬಿ.ಐ. ಅಧಿಕಾರಿಗಳು ಇಲ್ಲಿ ಬಂದು ವಿಚಾರ ಮಾಡಬೇಕಾದರೆ ನಮ್ಮ ರಾಜ್ಯ ಸರ್ಕಾರದ ಪೋಲೀಸರಿಗೆ ಅದು ಗೊತ್ತಾಗುತ್ತದೆ. ಆ ವರದಿಯನ್ನು ತರಿಸಿಕೊಂಡು ನೋಡಿ, ಅದು ಈ ಒಂದು ಪ್ರಕರಣಕ್ಕೆ ಸಂಬಂಧಪಟ್ಟಿದ್ದಾದರೆ ಇದು ಗಂಭೀರ ಪ್ರಶ್ನೆಯಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಅದು ಇಲ್ಲ ಎಂದು ಹೇಳಿದ ಮೇಲೆ, ಈ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಬಳಿ ವರದಿ ಇಲ್ಲ ಎಂದು ಹೇಳುತ್ತೀರಿ, ಐ.ಜಿ.ಪಿ ಯವರ ಬಳಿ, ಪೋಲೀಸ್ ಕಮಿಷನರ್ ಅವರ ಬಳಿ ವರದಿ ಇದೆಯೇ ಎಂದರೆ ಗೊತ್ತಿಲ್ಲ ಎಂದು ಹೇಳುತ್ತೀರಿ.....

SRI R. GUNDU RAO.—There is no report with the I.G.P. There is no report with the Commissioner. These are all false. Please believe me. There is no such complaint. There is no such matter before the Government or with the Police Department.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಿ.ಬಿ.ಐ. ಅಧಿಕಾರಿಗಳ ಕೆಲವು ರೆಕಾರ್ಡ್ಸ್, ಹಾಗೂ ಬ್ಯಾಂಕ್ ಪಾಸ್ ಬುಕ್ ಹಾಗೂ ರೈಲ್ವೇ ವಾರೆಂಟ್ ನಮ್ಮ ರಾಜ್ಯದಲ್ಲಿ ಕಳುವಾಗಿದೆ. ಇದು ದುರ್ದೈವದ ಸಂಗತಿ. ಇದು ನಮ್ಮ ರಾಜ್ಯದಲ್ಲಿ ಆಗಬಾರದಿತ್ತು, ಆಗಿದೆ. ಆ ಬಗ್ಗೆ ತ್ವರಿತವಾಗಿ ವಿಚಾರಣೆ ಮಾಡಿ ಆ ಡಾಕ್ಯುಮೆಂಟ್ ಯಾರಿಗೆ ಸಂಬಂಧಪಟ್ಟಿದ್ದು ಎಂಬುದನ್ನು ತಿಳಿದು ಆ ಬಗ್ಗೆ ತ್ವರಿತವಾಗಿ ಕಾರ್ಯ ಕೈಗೊಳ್ಳಬೇಕಾಗುತ್ತದೆ. ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ದಿವಸ ಆತ್ಮೀಯ ಸ್ನೇಹಿತರು ಎಂದು ಹೇಳಿದ್ದಾರೆ. ಅವರು ಆತ್ಮೀಯರು ಎಂದು ಹೇಳಿದ ಮೇಲೆ ಈ ಬಗ್ಗೆ ಬಹಳ ಎಚ್ಚರಿಕೆ ವಹಿಸ ಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ, ಅವರ ಬಗ್ಗೆ ಏನೂ ಇಲ್ಲ ಎಂದು ಹೇಳುವಾಗ ಮತ್ತೆ ಏಕೆ ಈ ವಿಚಾರ ಪ್ರಸ್ತಾಪ ಮಾಡುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ತಮ್ಮ ಕಂಪ್ಲೇಂಟ್‌ನಲ್ಲಿ ಇಂಪಾರ್ಟೆಂಟ್ ಡಾಕ್ಯುಮೆಂಟ್ಸ್ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಯಾವ ಮಂತ್ರಿಯವರ ಹಾಗೂ ಯಾವ ಪಾರ್ಲಿಮೆಂಟ್ ಸದಸ್ಯರ ಹೆಸರು ಇಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

SRI R. GUNDU RAO.—I am categorically telling as a Chief Minister of a State that there is no such thing. If you presume things. I cannot help it. It is far far from truth. Unless there is something, you cannot presume things and it is not befitting any Member of the House to believe reports where there is no truth.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನಾನು ಒಪ್ಪುತ್ತೇನೆ. ಸಿಬಿಐ ನವರು ಕಳೆದು ಕೊಂಡ ಕಾಗದಪತ್ರಗಳ ಬಗ್ಗೆ ಗಮನ ಕೊಡಬೇಕು. ಅವರು ಕಂಪ್ಲೇಂಟ್‌ನಲ್ಲಿ ಹೆಸರನ್ನು ನಮೂದಿಸಿಲ್ಲ. ಆದರೆ ಅದು ಈ ವ್ಯಕ್ತಿಗೆ ಸಂಬಂಧಪಟ್ಟಿದ್ದೇ ಇರಬೇಕು. ಇದನ್ನು ವಿಚಿತವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

SRI R. GUNDU RAO.—That is why the complaint has been lodged and the investigation is going on. There will be a fair and free investigation. The moment the investigation is over. the report will be made known to the public. I assure you that there will be free and fair investigation.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಕಂಪ್ಲೇಂಟ್ ಕಾಪಿ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಸ್ಪೆಸಿಫಿಕ್ಕಾಗಿ ಇಂತಿಂತಹದ್ದೇ ಕಳುವಾಗಿದೆಯೆಂದು ಅವರು ದೂರು ಇತ್ತಿದ್ದಾರೆ.

SRI S. R. BOMMAI.—The Officer has said that documents...

ಅಧ್ಯಕ್ಷರು.—ಕಂಪ್ಲೆ ೃಂಟ್ ಇಲ್ಲದೆ ಎವಿಡೆನ್ಸ್ ಹೇಳಿದರೆ, ಏನು ಹೇಳದೆ ಹೋದರೆ...

SRI S. R. BOMMAI.—The C.B.I. Officer has stated that there were documents. Those documents may pertain to this incident also.

ಶ್ರೀ ಆರ್. ಗುಂಡೂರಾವ್.—ಸಿ.ಬಿ.ಐ. ಒಂದೇ ವಿಷಯಕ್ಕೆ ಬರುವುದಿಲ್ಲ, There are so many things to be looked into by them. There may be some people having black money and there are hundreds of incidents for which the CBI comes to the State. It is not known to the State Government. They have got their own way of investigation and their own procedures. We do not know on what matter they have come and what are the papers they have lost. They have only said that a briefcase is lost containing some papers, some warrant and that is all. Suppose after investigation something is found, that will be made known. But we do not know for what purpose they have ome.

SRI P. RAMDEV.—That will never be recovered.

SRI R. GUNDU RAO.—What can I do for that ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕೇಳಿದ್ದು...

ಶ್ರೀ ಆರ್. ಗುಂಡೂರಾವ್.—ಅದು ಬೇರೆ ತರಹ ತಿರುಗುತ್ತದೆ ?.

SRI S. R. BOMMAI.—You cannot rule out that those papers which are lost do not pertain to this incident.

SRI R. GUNDU RAO.—I am not telling that.

ಶ್ರೀ ಎಸ್. ಆರ್. ಬೊಮ್ಮಾಯಿ.—ಬ್ಯಾನರ್ಜಿ ರಿಪೋರ್ಟ್ ಕೊಡಬೇಕೆಂದು ಕೇಳಿದ್ದೇನೆ.....

ಅಧ್ಯಕ್ಷರಂ.—ನಿನ್ನೆ ಬೊಮ್ಮಾಯಿಯವರು ನೋಟೀಸ್ ಕೊಟ್ಟಿದ್ದಾರೆ. ಅದು .....

SRI R. GUNDU RAO.—Alright. We will give it.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಪೇಪರ್ ಕೊಡಬೇಕು, ಇನ್ನೊಂದು ಕೇಳಿದ್ದೇನೆ. ಐಜಿಪಿ ವೈರ್‌ಲೆಸ್ ರಿಪೋರ್ಟ್ ಬಂದಿದೆ.

ಶ್ರೀ ಆರ್. ಗುಂಡೂರಾವ್.—ಏನೂ ಬಂದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಯಾವ ಅಧಿಕಾರಿ ಬಂದಿದ್ದಾರೆ ಅವರೇನು ಆರ್ಡಿನರಿ ಇನ್ಸ್‌ಪೆಕ್ಟರ್ ಅಥವಾ ಸಬ್‌ಇನ್ಸ್‌ಪೆಕ್ಟರ್ ಅಲ್ಲ. ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್, ದೆಹಲಿ ಅವರು ಗುರುತರವಾದ ತನಿಖೆಗೆ ಬಂದಿರುತ್ತಾರೆ. ಅವರೇನು ಸಾಮಾನ್ಯವಾದ ತನಿಖೆಗೆ ಬಂದಿರುವುದಿಲ್ಲ ಸಾಮಾನ್ಯವಾದ ತನಿಖೆಗಳನ್ನು ಮಾಡುವುದಿಲ್ಲ. ಜೊತೆಗೆ ಜವಾಬ್ದಾರಿಯುತವಾದ ಪತ್ರಿಕೆಗಳಲ್ಲಿ ಬಂದಿದೆ. ಮೊನ್ನೆ ಮಂತ್ರಿಗಳು ಮಾತನಾಡುತ್ತಾ ಕೆಲವು ಪತ್ರಿಕೆಗಳು ಹಾಗೆ ಹೀಗೆ ಎಂದು ಹೇಳಿದರು. ಈಗ ಬಂದಿರುವಂತಹ ವಿಷಯ ಜವಾಬ್ದಾರಿಯುತವಾದ ಹಿಂದೂ ಪತ್ರಿಕೆಯಲ್ಲಿ ಹೀಗೆ ಬಂದಿದೆ. ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಜವಾಬ್ದಾರಿಯುತವಾದ ಒಂದು ಪತ್ರಿಕೆಯಲ್ಲಿ ಬಂದಿಲ್ಲ, ಆಲ್ ಇಂಡಿಯಾ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಆರ್. ಗುಂಡೂರಾವ್.—ಜವಾಬ್ದಾರಿಯೋ ಬೇಜವಾಬ್ದಾರಿಯೋ, as a Chief Minister I am telling you that it is all false and wrong.

ಶ್ರೀ ಎಂ. ಚಂದ್ರಶೇಖರ್.—ತತ್ವ ಒಂದೇ, ನಿಮ್ಮ ಪೋಲೀಸಿನವರೇ ನಿಮಗೆ ಸರಿಯಾದ ಮಾಹಿತಿಗಳನ್ನು ಕೊಡದೇ ಇರಬಹುದು. ಇದರಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ನಿಮಗೆ ಸರಿಯಾದ ವಿವರ ಕೊಡುವುದಿಲ್ಲ. ಆದ್ದರಿಂದ ಸರಿಯಾಗಿ ತನಿಖೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಪತ್ರಿಕೆಗಳಲ್ಲಿ ಕರೆಕ್ಟಾಗಿ ವರದಿ ಮಾಡಿದ್ದಾರೋ ಇಲ್ಲವೋ ಆ ವಿಷಯವನ್ನು ಸಿಬಿಐನವರು ವಿಚಾರ ಮಾಡುತ್ತಾರೆ. ಹಾಗಿದೆ, ಹೀಗಿದೆ ಎಂದೂ ಹೇಳಿದರೆ Government will never take it seriously. ಶ್ರೀಮಾನ್ ಬೊಮ್ಮಾಯಿಯವರು ಇಂತಹ ವಿಚಾರದಲ್ಲಿ ಹೇಳುವಾಗ ಸ್ವಲ್ಪ ಸರಿಯಾಗಿ ಹೇಳಬೇಕು. ದೆಹಲಿಯಿಂದ ಬಂದಿರುವವರು ಆ ತರಹ ಹೇಳಿಲ್ಲ, ಇನ್ನೊಬ್ಬರು ಹೇಳಿದರೂ, ಸುಮ್ಮನೆ ತಿಳಿದು ಬಂದಿದೆ, ಗಮನಿಸಲಾಗಿದೆ ಹಾಗೆ ಹೇಳಿದೆ, ಹೀಗೆ ಹೇಳಿದೆ ಎಂದು ಹೇಳಿದರೆ The Government will not take it seriously. We are not bothered about it

ಶ್ರೀ ಎಸ್. ಆರ್. ಬೊಮ್ಮಾಯಿ.—ಪತ್ರಿಕಾಧರ್ಮ ಇದೆ, ಪತ್ರಿಕೆಗಳಿಗೊಂದು ನೀತಿ ಇದೆ. It is a source of information.

ಶ್ರೀ ಆರ್. ಗುಂಡೂರಾವ್ —ಸುಪ್ರೀಂ ಕೋರ್ಟಿನ ಜಸ್ಟೀಸ್ ಈ ನೀತಿಯ ಬಗ್ಗೆ ಹೇಳಿದ್ದಾರೆ. ನಾನು ಹೇಳಿದ್ದೂ ರಾಜಕೀಯ, ಅವರೇ ಹೇಳಿದ್ದಾರೆ. ನಾನು ಹೇಳಿದ್ದು ಬೇರೆ. ಬೇರೆ ಬರೆದಿದ್ದಾರೆಂದು ಅವರು ೨೫ ವರ್ಷಗಳ ಕಾಲ ಇಡೀ ರಾಷ್ಟ್ರದಲ್ಲಿ ಅಂತರರಾಷ್ಟ್ರದಲ್ಲಿ ಹೆಸರು ಪಡೆದಂತ ವಕೀಲರು ಈ ಪತ್ರಿಕೆಯ ಬಗ್ಗೆ ಶ್ರೇಷ್ಠ ನ್ಯಾಯಾಧೀಶರು ನಮ್ಮ ರಾಜ್ಯಾಂಗದಲ್ಲಿ ನಮಗಿಂತ ಹೆಚ್ಚಿನ ಗೌರವ ಇರತಕ್ಕಂತಹವರು ಅವರೇ ಹೇಳಿದ್ದಾರೆ ಅದು ಸಂಳ್ಳು ಎಂದು. ನಾನು ಹೇಳಿದ್ದು ಅವರೇ ಹೇಳಿದ್ದಾರೆ. ಆದ್ದರಿಂದ ತಿಳಿದುಬಂದಿದೆ, ಹೀಗಿದೆ, ಹಾಗೆ ಇದೆ ಗೊತ್ತಿದೆ, ಅಲ್ಲಿದೆ, ಇಲ್ಲಿದೆ, ಮುಂದಿದೆ, ತಂದಿದೆ, ಎಂದು ಳುವುದು ಬೇಡ ಹೇಳುವುದನ್ನು ಡೈರೆಕ್ಟಾಗಿ ಹೇಳಿ, "We have got the information. So and so has said in the Press Conference and it is true."

ಶ್ರೀ ಎಂ. ಚಂದ್ರಶೇಖರ್.—ತಾವು ವೀಕ್‌ಲಿ ಬಗ್ಗೆ ಹೇಳಿದ್ದೀರಿ. ಅದನ್ನು ೩೦ವರ್ಷಗಳಿಂದಲೂ ನೋಡುತ್ತಿದ್ದೇವೆ. ನಾನು ಅದರ ಬಗ್ಗೆ ಹೇಳುವುದಿಲ್ಲ, ಅಂತಹ ಪತ್ರಿಕೆಯಲ್ಲಿದ್ದರೆ ಮಾನ್ಯತೆ ಬೇಡ. ಆದರೆ ೮೦ ವರ್ಷಗಳಿಂದಲೂ ಒಂದು ನೆಲೆ, ನೀತಿ ಮತ್ತು ಜವಾಬ್ದಾರಿಯುತವಾಗಿರತಕ್ಕ ಪತ್ರಿಕೆಯ ಮೇಲೆ ಈ ರೀತಿ ಮಾತನಾಡುವುದು ಬೇಡ.

ಶ್ರೀ ಆರ್. ಗುಂಡೂರಾವ್.—೮೦ ವರ್ಷಗಳಲ್ಲಿ ಒಂದೂ ಕೂಡ ಸತ್ಯವಾಗಿಲ್ಲ. ದುರಾದೃಷ್ಟವೋ ಆದೃಷ್ಟವೋ ಒಂದೂ ಸತ್ಯವಾಗಿಲ್ಲ. ಒಂದಾದರೂ ಸತ್ಯವಾದ ವರದಿ ಬಂದಿದ್ದರೆ, ಒಂದೂ ಕೂಡ ಇಲ್ಲ, ೧೦೦ರಲ್ಲಿ ೧೦ ಸತ್ಯವಾಗಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಎಂ. ಚಂದ್ರಶೇಖರ್.—ಹಾಗೆ ಹೇಳಲಿಕ್ಕೆ ಹೋಗಬೇಡಿ. ಪತ್ರಿಕೆಗಳ ಅರ್ಥ ತಪ್ಪುತ್ತದೆ.

MR. SPEAKER.—We are not concerned about these things ನೋಟೀಸ್ ಏನು ಕೊಟ್ಟಿದ್ದೀರಿ ಅದಕ್ಕೆ ಕನ್‌ಫೈನ್ ಆಗಿ ವಿಚಾರ ನಡೆಯಬೇಕು. Please confine yourself to the notice you have given.

ಶ್ರೀ ಎಸ್. ಆರ್ ಬೊಮ್ಮಾಯಿ —ಪಶ್ಚಿಮಮಂತ್ರಿಗಳು ಎಮೋಷನಲ್ ಆಗುತ್ತಿದ್ದಾರೆ. ಅವರ ಇಕ್ಕಟ್ಟು ಅರ್ಥವಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಏನೂ ಆಗುವುದಿಲ್ಲ, ೬ ಅಡಿ ಉದ್ದ ಇದ್ದೇನೆ, ೧೮೦ ಪೌಂಡ್ ತೂಕ ಇದ್ದೇನೆ. ಮೊಸೆ ಬಿಟ್ಟಿದ್ದೇನೆ, ನಿಮ್ಮ ಕಣ್ಣಿಗೆ ಹೇಗೆ ಕಾಣುತ್ತೇನೆ ? ನಿಮ್ಮಷ್ಟು ಸುಂದರವಾಗಿಲ್ಲವೆಂದು ಕಾಣುತ್ತದೆ. I cannot help it.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಸುಂದರವಾಗಿಲ್ಲವೆಂದು ನಾವು ಹೇಳಿಲ್ಲ. ತಾವು ಹೇಳುವಾಗ ಎಮೋಷನಲ್ ಆಗಿ ಹೇಳುತ್ತಿದ್ದೀರಿ. ಪತ್ರಿಕೆಗಳಲ್ಲಿ ಬರೆದಿರತಕ್ಕುದ್ದು ಅನೇಕ ವಿಚಾರಗಳು ಸತ್ಯವಾಗಿರುತ್ತವೆ. ಕೆಲವು ತಪ್ಪು ಇರಬಹುದು ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ತಿಳಿದು ಬಂದಿದೆ, ಗೊತ್ತಾಗಿದೆ ಇಂತಹ ವಿಚಾರಗಳನ್ನು ನಂಬಬೇಡಿ. ಸರಿಯಾಗಿ ಹೇಳಿದರೆ ಒಪ್ಪಿಕೊಳ್ಳೋಣ. I have nothing to say against them. ಒಂದು ಪಕ್ಷ ಕೇಳಿದ್ದೇನೆ, ತಿಳಿದು ಬಂದಿದೆ ಎಂದು ಹೇಳಿದ್ದಕ್ಕೆ ನಾನು ಇಲ್ಲವೆಂದು ಹೇಳಿದ್ದೇನೆ. The matter ends there. Why do you proceed again ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಯಾವುದೇ ಪತ್ರಿಕೆಯ ಬಗ್ಗೆ ಹೇಳಿರಬಹುದು. ವಾಟರ್‌ಗೇಟ್ ಪ್ರಕರಣದಲ್ಲಿ ಸುದ್ದಿ ಪ್ರಸಾರ ಮಾಡಿದ್ದರಿಂದ ರಾಷ್ಟ್ರದ ಅಧ್ಯಕ್ಷರು ರಾಜೀನಾಮೆ ಕೊಟ್ಟಿರತಕ್ಕದ್ದು ಪರಿಣಾಮ ಬೀರಿಲ್ಲವೇ ? ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿರತಕ್ಕದ್ದು ರಾಷ್ಟ್ರದ ವಿಚಾರ.

MR. SPEAKER.—There is one sentence in the Statement, "The matter is under investigation. ಆದು ಆಗುವಾಗ ತಮ್ಮ ಊಹೆ ನಿಜವಾಗಿ ಕಂಡುಬಂದರೆ then you have got a right to raise it again.

ಶ್ರೀ ಎಂ. ಚಂದ್ರಶೇಖರ್.— ಈಗ ಬಂದಿರುವ ಸುದ್ದಿ.

MR. SPEAKER.—You must take the matter as said on the floor of the House. Let us go by that. The Government has not closed the issue. The Government says that the matter is under investigation Supposing during the course of investigation what you suspect turns out to be true, you have got right to raise it again.

SRI S. R. BOMMAI.—The Superintendent of Police of CBI, it is alleged, has lodged a complaint to Uppar Pet Police here on Monday stating that a Brief Case containing official records including his report on the investigation involving Sri F. M. Khan, Member of Parliament and the Karnataka Planning Minister. They are still free.

MR. SPEAKER.—You should be fair enough to accept when the Hon. Chief Minister says that he would pass on the complaint.

SRI R. GUNDU RAO.-Mr. Bommai might have argued in a number of murder cases and got acquitted all the accused people. My complaint is, there is no complaint

MR. SPEAKER.—After investigation, what you said turnsout to be true, again you can raise it.

ಶ್ರೀ ಪಿ. ರಾಮದೇವ್.—ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥಾ ಮಾತನ್ನು ನಾನು ಒಪ್ಪುತ್ತೇನೆ. ಅವರು ಫ್ರೀ ಅಂಡ್ ಫೇರ್ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಭರವಸೆ ಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ನನಗೆ ಈ ಬಗ್ಗೆ ಏನು ಸಂಶಯ ಇದೆ ಎಂದರೆ ಫ್ರೀ ಅಂಡ್ ಫೇರ್ ಇನ್‌ವೆಸ್ಟಿಗೇಷನ್ ಮಾಡತಕ್ಕಂಥಾ ಅಧಿಕಾರಿಗಳನ್ನ ಈಗಾಗಲೇ ವರ್ಗ ಮಾಡಿಬಿಟ್ಟಿದ್ದಾರೆ. ಈಗ ಇರತಕ್ಕಂಥಾ ಅಧಿಕಾರಿಗಳ ಪೈಕಿ ಫ್ರೀ ಅಂಡ್ ಫೇರ್ ಆಗಿ ಇನ್‌ವೇಸ್ಟಿಗೆಷನ್ ಮಾಡುವುದಕ್ಕೆ ಸಾಧ್ಯವೇ ಇಲ್ಲ ಅನ್ನುವ ಅನುಮಾನ ನಮಗೆ ಬಂದಿದೆ.

ಶ್ರೀ ವಿ. ಬಿ. ಭಾವಿ.—ಯಾವಾಗಲೂ ಕೂಡ ಈ ವಿರೋಧಪಕ್ಷದವರ ಕಣ್ಣಿಗೆ ಕಾಣುವುದು ಇಂಥಾ ಅನುಮಾನವೇ ಇನ್ನೇನೂ ಕಾಣುವುದಿಲ್ಲಾ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಅದೇನೆಂದರೆ ಈ ಸಭೆಯ ಮುಂದೆ ಇರತಕ್ಕಂಥಾ ಇಷ್ಯೂನೇ ಬೇರೆ, ಶ್ರೀಮಾನ್ ಪಿ. ರಾಮದೇವ್ ಅವರು ಮಾತನಾಡತಕ್ಕಂಥಾ ವಿಷಯವೇ ಬೇರೆ.

MR. SPEAKER—There is no point of Order.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ ಈ ರೂಲ್ ಪುಸ್ತಕವನ್ನು ತೆಗೆದು ಇಟ್ಟುಬಿಡುವುದೇ ?

ಅಧ್ಯಕ್ಷರು.—ಹಾಗೇ ಮಾಡಿ ತೆಗೆದು ಇಟ್ಟುಬಿಡಿ ಅಲ್ಲಿರತಕ್ಕಂಥಾ ವಿಷಯಗಳನ್ನೆಲ್ಲಾ ಚೆನ್ನಾಗಿ ಓದಿಕೊಂಡು ಬಿಟ್ಟು, ಅಲ್ಲಿರುವ ರೂಲ್ಸ್‌ಗಳನ್ನೆಲ್ಲಾ ತಲೆಯೊಳಗೆ ಇಟ್ಟುಕೊಂಡು ಆ ಮೇಲೆ ಪುಸ್ತಕವನ್ನು ಆಚೆಗೆ ಇಟ್ಟುಬಿಡಿ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ನಾನು ಹಾಗೆಯೇ ಮಾಡಿದ್ದೇನೆ. ಅಲ್ಲಿರುವ ರೂಲ್ಸ್‌ಗಳನ್ನೆಲ್ಲಾ ಓದಿಬಿಟ್ಟಿದ್ದೇನೆ, ಇನ್ನು ತಾವು ಹೇಳಿದ ಹಾಗೆ ಮಾಡಬೇಕಾಗಿದೆ.

ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ, ಅವರು ಹಾಗೆಯೇ ಮಾಡಿರುವುದು. ಅವರು ಏನೇ ಓದಿದರು ಅದನ್ನು ಆಚೆಗೆ ಇಟ್ಟುಬಿಟ್ಟಿದ್ದಾರೆ, ಅದೇ ಬಂದಿರುವುದು.

SRI S. M. SHEERNALY CHANDRASHEKAR.—He is insisting on that particular officer.

MR. SPEAKER.—It is for him to say. Why do you say that he should not raise it ? Let us see whether this is relevant or not.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ, ಈ ದೂರು ಬಹಳ ಗಹನವಾದದ್ದು. ಈ ದೂರಿನಲ್ಲಿ ರಾಜಕಾರಣಿಗಳು ಇಂಟರಾಗೇಟ್ ಮಾಡಿದ್ದಾರೆ ಅಂತ ಗೊತ್ತಾಗಿದೆ. ಹಾಗೆಯೇ ಒಬ್ಬ ಮಂತ್ರಿ ಇದರ ಬಗ್ಗೆ ಇಂಟರಾಗೇಟ್ ಮಾಡಿದ್ದಾರೆ ಅಂತ ಗೊತ್ತಾಗಿದೆ, ಹಾಗೆಯೇ ಕೆಲವು ಸೀನಿಯರ್ ಆಫೀಸರ್ಸ್ ಇಂಟರಾಗೇಟ್ ಮಾಡಿದ್ದಾರೆ ಅಂತ ಗೊತ್ತಾಗಿದೆ. ಹೀಗಿರುವುದರಿಂದ ಇದನ್ನು ನೇರವಾಗಿ ಸಿ. ಬಿ. ಐ. ಗೆ ಕೊಡಬೇಕಂ ಎಂದು ನನ್ನ ಸಲಹೆ.

MR. SPEAKER.—How can that be ? Please hear me. The CBI Officer has lodged a complaint with the police station. It is for the police to take up investigation. You want that to be passed on to him for investigation. It is a thing which is completely unheard of.

ಶ್ರೀ ಪಿ. ರಾಮದೇವ್.—ಸ್ವಾಮಿ, ಕಡೇಪಕ್ಷ ಇದನ್ನು ಸಿ. ಓ. ಡಿ. ಗಾದರೂ ಕೊಡಿ. ಏತಕ್ಕೆಂದರೆ very very strange things are happening in the State, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ದಿವಸ ತನಿಖೆ ಮಾಡಿದಂಥಾ ಅಧಿಕಾರಿಗಳ ರೆಕಾರ್ಡ್ ಕಳ್ಳತನವಾಗಿರುವಾಗ ಮುಂದೆ ಈ ಬಗ್ಗೆ ತನಿಖಾಧಿಕಾರಿಗಳು ಬಂದಾಗ ಅವರೂ ಸಹ ನಾಪತ್ತೆ ಆಗುತ್ತಾರೆ. ಅಂಥ ಸಂದರ್ಭ ಬರಬಹುದು. ಈ ವಿಷಯವನ್ನು ಏತಕ್ಕೆ ಹೇಳಬೇಕಾಗಿದೆ ಇಂಥಾವರಿಗೆ ಯಾವ ರೂಲೂ ಅಪ್ಲೈ ಆಗುವುದಿಲ್ಲ, ಯಾವ ಲಾ ಕೂಡ ಅಪ್ಲೈ ಆಗುವುದಿಲ್ಲ, ಯಾವ ಕೋರ್ಟಿಗೆ ಹೋದರೂ ಏನೂ ಆಗುವುದಿಲ್ಲ, ಯಾವ ಕೋಡೂ ಅಪ್ಲೈ ಆಗುವುದಿಲ್ಲ, ಇವರಿಗೆ ಅಪ್ಲೈ ಆಗುವ ಕೋಡ್ ಒಂದೇ ಒಂದು ಮಾತ್ರ, ಆದ್ಯಾವುದೆಂದರೆ ಒಂದೇ ಒಂದು. ಇನ್ನಾವುದೂ ಅಪ್ಲೈ ಆಗುವುದಿಲ್ಲ. ಇವರಂ ಆ ತನಿಖಾಧಿಕಾರಿಯ ಕಾರಿನ ಬಾಗಿಲನ್ನು ಒಡೆದು ಆ ರೆಕಾರ್ಡನ್ನು ಕಳ್ಳತನ ಮಾಡಬೇಕಾದರೆ.....

(INTERRUPTION)

MR. SPEAKER.—These words will not go into the record.

ಶ್ರೀ ಜೆ. ಡಿ. ಸೋಮಪ್ಪ.—ಇಂದಿರಾಗಾಂಧಿಯವರ ಹೆಸರು ಹೇಳಿದರೆ ಅವರ ಮೈ ನಡುಗುತ್ತದೆಯೆಲ್ಲಾ ಏತಕ್ಕೆ ಸ್ವಾಮಿ ?

ಶ್ರೀ ಮೈಕೇಲ್ ಬಿ.ಫರ್ನಾಂಡಿಸ್.—ಇಂದಿರಾಗಾಂಧಿಯವರಂಥಾ ಹತ್ತು ಜನರು ಬಂದರೂ ಕೂಡ ನಮ್ಮ ಮೈ ಏನೂ ನಡುಗುವುದಿಲ್ಲಾ. ನೀವು ನಡುಗುತ್ತೀರಿ ಅಷ್ಟೆ. ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ, ನಾವೇನೂ ಯಾರಿಗೂ ಹೆದರುವುದಿಲ್ಲ.

MR. SPEAKER.—Why do you want to go and quarrel with the two bachelors ?

(LAUGHTER)

SRI MICHAEL B. FERNANDES.—We are not afraid of Mrs. Gandhi.

ಶ್ರೀ ಪಿ. ರಾಮದೇವ್.—ಸ್ವಾಮಿ, ಈ ಒಂದು ಘಟನೆ ನೋಡಿದರೆ ತುಂಬಾ ನಗೆಪಾಟಲಾಗಿದೆ, ಅಲ್ಲದೆ ಇದು ನಮ್ಮ ರಾಜ್ಯಕ್ಕೆ ಒಂದು ಅಪಕೀರ್ತಿ ತರುವಂಥಾ ಒಂದು ಘಟನೆಯಾಗಿದೆ. ಅವರು ಉಪ್ಪಾರಪೇಟೆಗೆ ಹೋಗಿ ಇದರ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ.

MR. SPEAKER.—It is a matter of your opinion.

ಶ್ರೀ ಪಿ. ರಾಮದೇವ್.—ಕೊನೆಯದಾಗಿ ಹೇಳುವುದೇನೆಂದರೆ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ಬರುವ ಹಾಗೆ ಮಾಡಬೇಕು. ಅದಕ್ಕಾಗಿ ಇದನ್ನು ಸಿ. ಓ. ಡಿ. ಗೇನೇ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹಿಂದೆ ಇದ್ದ ಸರ್ಕಾರದವರು, ರಾಜ್ಯದಲ್ಲಿ ಏನಾದರೂ ಸಿ. ಬಿ. ಐ. ಎನ್‌ಕ್ವೈರಿ ಮಾಡಬೇಕಾದರೆ ನಮ್ಮ ಸರ್ಕಾರದವರ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು, ಅನ್ನುವುದನ್ನು ಮಾಡಿದ್ದರು, ನಾವು ಬಂದ ಮೇಲೆ ಅದನ್ನು ಕಿತ್ತು ಹಾಕಿದ್ದೇವೆ ಅನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅದಕ್ಕಾಗಿ ನಾನು ಅವರಿಗೆ ಶಹಭಾಸ್‌ಗಿರಿ ಕೊಡುತ್ತೇನೆ. ಮತ್ತು ಅವರು ಹೇಳಿದ ಹಾಗೆ ಸಿ. ಓ, ಡಿ. ಯವರು ಮಂತ್ರಿಗಳ ಬಗ್ಗೆಯಾದರೂ ಎನ್‌ಕ್ವೈರಿ ಮಾಡಬಹುದು,

---

* As orderd by the Chair the words are expunged.

ಆಫೀಸರ್ಸ್ ಮೇಲಾದರೂ ಎನ್‌ಕ್ವೈರಿ ಮಾಡಬಹುದು, ಬ್ಲಾಕ್ ಮನಿ ಇಟ್ಟುಕೊಂಡಿರುವವರ ಬಗ್ಗೆ ಯಾದರೂ ಎನ್‌ಕ್ವೈರಿ ಮಾಡುವ ಅಧಿಕಾರ ಇದೆ. ಇಂಥಾ ಅಧಿಕಾರಿಗಳ ವರದಿಗಳು ಏನು ಇವೆ ಅವರ ವರದಿಗಳು ಕಳ್ಳತನವಾಗಿರತಕ್ಕಂಥಾ ಘಟನೆ ನೋಡಿದರೆ ಇದುವರೆಗೆ ಎಂದೂ ನಡೆದಿಲ್ಲಾ. ಇಂಥಾ ಆಫೀಸರ್ಸ್‌ಗೆ ತಾವು ಸರಿಯಾದಂಥಾ ಪ್ರೊಟೆಕ್ಷನ್ ಕೊಡದೇ ಹೋದರೆ ಅವರು ಇನ್ನಾವ ರೀತಿಯಲ್ಲಿ ಕೆಲಸ ಮಾಡಬಹುದು ಅನ್ನುವುದನ್ನು ಯೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರು ಕಳ್ಳಭಟ್ಟಿ ಮಾಡತಕ್ಕಂಥಾವರ ಮೇಲಾಗಲಿ. ಅಥವಾ ಬ್ಲಾಕ್ ಮನಿ ಇಟ್ಟುಕೊಂಡಿರುವವರ ಮೇಲಾಗಲಿ ಅಥವಾ ರಾಷ್ಟ್ರದ್ರೋಹ ಮಾಡತಕ್ಕಂಥಾವರ ಮೇಲಾಗಲಿ ಹೀಗೆ ಬೇಕಾದಷ್ಟು ಜನರ ಮೇಲೆ ಎನ್‌ಕ್ವೈರಿ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಗಳೂ ಕೂಡ ಗೊತ್ತಿಲ್ಲದೇ ಇರುವ ರೀತಿಯಲ್ಲಿ ಇವರು ಬಂದು ಎನ್‌ಕ್ವೈರಿ ಮಾಡಬೇಕಾಗುತ್ತದೆ. ಹೀಗಿರುವಾಗ ಅವರು ಈ ಒಂದು ಘಟನೆ ಬಗ್ಗೆ ರಿಪೋರ್ಟ್ ಮಾಡಿಕೊಂಡು ತಮ್ಮ ಕಾರಿನಲ್ಲಿ ಭದ್ರವಾಗಿ ಇಟ್ಟುಕೊಂಡಿದ್ದುದನ್ನು, ಒಂದು ಹೋಟೆಲ್ ಮುಂದೆ ಕಾಪಿಗಾಗಿ ಆ ಕಾರನ್ನು ನಿಲ್ಲಿಸಿಬಿಟ್ಟು ಹೋದಾಗ ಅವರ ಕಾರ್ ಬಾಗಿಲನ್ನು ಒಡೆದು ಆ ರೆಕಾರ್ಡ್ ಅನ್ನು ಕಳ್ಳತನ ಮಾಡಬೇಕಾದರೆ, ಇಂಥಾವರಿಗೇನೇ ಸರಿಯಾದ ಸೇಫ್ಟಿ ಇಲ್ಲದೇ ಹೋದರೆ ಯಾವುದರಲ್ಲೇ ಆಗಲಿ ನಿಷ್ಪಕ್ಷಪಾತವಾದ ಎನ್‌ಕ್ವೈರಿಯನ್ನು ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಯಾವ್ಯಾವ ಆಫೀಸರ್ಸ್ ರಿಪೋರ್ಟ್ಸ್ ಇತ್ತೋ, ಎಷ್ಟೆಷ್ಟು ಮುಖ್ಯವಾದ ರಿಪೋರ್ಟ್ ಇತ್ತೋ ಏನು ಇತ್ತೋ ಗೊತ್ತಿಲ್ಲಾ. ಆ ರಿಪೋರ್ಟು ಏನಾದರೂ ಟ್ರೇಸ್‌ಔಟ್ ಆಗದೇ ಹೋದರೆ ಅವರ ಮೇಲಾಧಿಕಾರಿಗಳಿಂದ ಏನು ಶಿಕ್ಷೆ ಅನುಭವಿಸ ಬೇಕಾದೀತೋ ಗೊತ್ತಿಲ್ಲಾ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಸೀರಿಯಸ್ ಆಗಿ ತೆಗೆದುಕೊಂಡು ವಿಚಾರಣೆ ಮಾಡಬೇಕು. ಈವೊತ್ತಿನ ದಿವಸ ಮಂತ್ರಿಗಳ ಮೇಲೆ ಇರಬಹುದು, ನಾಳೆದಿವಸ ಅಧಿಕಾರಿಗಳ ಮೇಲೆ ಆಗಬಹುದು ಮತ್ತೊಂದು ದಿವಸ ಇನ್ಯಾರಾದರ ಮೇಲಾದರೂ ಆಗಬಹುದು, ನಾಳೆದಿವಸ ಇನ್ನಾವ ಘಟನೆ ಬರ ಬಹುದೋ, ಗೊತ್ತಿಲ್ಲ, ಆದುದರಿಂದ.....

ಶ್ರೀ ವಿ. ಬಿ. ಭಾವಿ.—ಅಧ್ಯಕ್ಷರೇ. ಮಾನ್ಯ ಸದಸ್ಯರು ಬೇರೆ ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್‌ನಲ್ಲಿ "Member of Parliament and a Minister about the snatching away" ಅಂತ ಇರುವುದರಿಂದ ಅದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದಾರೆ, ಆದರೂ ಪರವಾಯಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾನು ಬೇರೆ ಯಾವ ಉದ್ದೇಶ ಇಟ್ಟುಕೊಂಡು ಹೇಳುತ್ತಾ ಇಲ್ಲ. ಇದರಲ್ಲಿ ಬೇರೆ ಯಾವ ಮುಖ್ಯವಾದಂಥಾ ರೆಕಾರ್ಡ್ಸ್ ಇದೆಯೋ ? ಆದುದರಿಂದ ಅದನ್ನು ಟ್ರೇಸ್ ಮಾಡಬೇಕು ಅನ್ನುವ ಉದ್ದೇಶದಿಂದ ಹೇಳುತ್ತಾ ಇದ್ದೇನೆ. ಒಂದು ಹೋಟೆಲ್ ಮುಂದೆ ಕಾರ್ ನಿಲ್ಲಿಸಿದಾಗ, ಆ ಕಾರಿನ ಬಾಗಿಲನ್ನು ಬಲವಂತವಾಗಿ ಒಡೆದು ಆ ರೆಕಾರ್ಡ್ಸ್‌ನ್ನು ಎತ್ತಿಕೊಂಡು ಹೋದರು ಎಂದರೆ ಇದು ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ತರುವಂಥಾದ್ದಲ್ಲ. ಆದುದರಿಂದ ಈ ಕಂಪ್ಲೈಂಟ್ ಬಗ್ಗೆ ಸರಿಯಾಗಿ ಇನ್‌ವೆಸ್ಟಿಗೇಷನ್ ಮಾಡಿಸಬೇಕು ಅಲ್ಲದೆ ಅವರಿಗೆ ಸಮಗ್ರವಾದ ಪ್ರೊಟೆಕ್ಷನ್ ಕೊಡಬೇಕು ಎಂದು ಹೇಳುತ್ತೇನೆ. ಇದು ಬಹಳ ಮುಖ್ಯವಾದಂಥ ಗಹನವಾದ ವಿಚಾರ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಿ, ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಮಾಡುವ ಹಾಗೆ ಮಾಡಿ ಇದನ್ನು ಟ್ರೇಸ್‌ಔಟ್ ಆಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ—ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸ ಬೇಕು. ಅವರ ಕಂಪ್ಲೈಂಟ್ ಏನು ಇದೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಅದು ಈ ರೀತಿ ಇದೆ.—

"The brief case containing all the importance records of Case No. (The number is not visible).../SPF.1/81—"

MR. SPEAKER.—It is for the police officer to note it and make an investigation about it. Now that you have read it ; keep it in your mind or if you want pass it on to your friends. Supposing for argument sake if you were to find something...

SRI S. R. BOMMAI.—The CBI Officer has said that important documents referring to particular cases registered by the CBI are missing. Whether this case relates to any of this matter ?

MR. SPEAKER.—How can the Home Minister or the Chief Minister know ? They have not come here with prior intimation either to the Chief Minister who holds the Home portfolio or to the Police Officers.

SRI S. R. BOMMAI.—I did not tell that. What I would like to know from the Chief Minister is, whether the CBI Officer who is the complainant has been interrogated by our Police and whether he has disclosed the Case Number ?

MR. SPEAKER.—Let us not go deep into the matter. I would also request the Chief Minister to close this matter.

SRI R. GUNDU RAO.—At this stage itself, let us close the matter.

11-00 A.M.

MR. SPEAKER.—You make a note of it and take advantage of it.

SRI S. R. BOMMAI—I will leave it here.

MR. SPEAKER.—This is a very serious matter.

SRI S. R. BOMMAI.—I will request the hon. Chief Minister that is also in a way involved in it. It refers to him. Therefore, our suggestion is that this matter may be got investigated by the COD. instead of by petty officers who are working under the Commissioner of Police.

MR. SPEAKER.—I would like to quote your own sentence 'in this case'. What do you mean by that ? That is not fair. Are you definite about it ? Without being definite about it, you are involving the officer also. It is not fair. After all we have got senior officers.

SRI S. R. BOMMAI.—'In a way' with full responsibility I am referring to it.

MR. SPEAKER.—That is why my request was to please make note of it and you take advantage of it. Supposing for argument sake, tomorrow you come to know of the action, then you can raise. You have got opportunity.

** As orderd by the Chair the words are expunged.

SRI S. R. BOMMAI.—Now, I am making a specific request. Under the present circumstances, I would like the Government to entrust this matter to the C.O.D. so that there would be a fair enquiry. It is not the jewellery that has been stolen. It is the investigation records that have been stolen. In such cases when it involves such an important matter, I would like the Government to entrust this matter to the State COD so that there would be a fair enquiry.

SRI R. GUNDU RAO.—At tnis stage it does not arise, because the investigation is on.

ಶ್ರೀ ಕೆ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ...

MR. SPEAKER.—The portion of sentence make objection to will not go into record. We shall take it up on Tuesday, Sri K.Madegowda

ಶ್ರೀ ಕೆ. ಮಾದೇಗೌಡ —ಆಗಬಹುದು.

ಅಧ್ಯಕ್ಷರು —ಈಗ ಶ್ರೀಮತಿ ಅನುಸೂಯ ಗಜಾನನ ಶರ್ಮರವರ 'ಪ್ರೆಸೆಂಟೇಷನ್ ಆಫ್ ಪಿಟಿಷನ್ಸ್'ನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

Presentation of Petitions

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಅದನ್ನು ನಾನೇ ಮಂಡಿಸುತ್ತೇನೆ. ಶ್ರೀಮತಿ ಅನುಸೂಯ ಗಜಾನನ ಶರ್ಮರವರ ಹೆಸರಿನಲ್ಲಿರತಕ್ಕಂಥ ೧೨ ಪಿಟಿಷನ್‌ಗಳನ್ನು ನಾನು ಈ ಸಭೆಯ ಮುಂದಿಡುತ್ತಿದ್ದೇನೆ.

MR. SPEAKER.—Petitions presented.

Represenation by Members

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಸಭಾಧ್ಯಕ್ಷರೇ, ಇತ್ತೀಚಿನ ವರದಿ ಪ್ರಕಾರ ಚುನಾವಣಾ ಆಯೋಗದವರು ಕಾಂಗ್ರೆಸ್ (ಯು) ಪಕ್ಷವನ್ನು ರಾಜಕೀಯ ಪಕ್ಷಗಳ ಪಟ್ಟಿಯಿಂದ ತೆಗೆದಿದ್ದಾರೆ.

ಅಧ್ಯಕ್ಷರು.—ನಿಮ್ಮ ಪಕ್ಷದ ಶ್ರೀ ಕೆಂಗೇಗೌಡರೂ ಸಹ ಈ ಬಗ್ಗೆ ನನಗೆ ಒಂದು ಪತ್ರವನ್ನು ಬರೆದಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅದಕ್ಕಾಗಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಆ ಪಕ್ಷದ ನಮ್ಮ ಸ್ನೇಹಿತರೆಲ್ಲಾ ಕಾಂಗ್ರೆಸ್ (ಯು) ಗುಂಪಿನಲ್ಲಿ ಕುಳಿತುಕೊಳ್ಳುತ್ತಿದ್ದರು ಅವರ ಪಕ್ಷವನ್ನು ಇಲ್ಲಿ ರಾಜಕೀಯ ಪಕ್ಷವಾಗಿ ಪರಿಗಣಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಆದ ಕ್ಕಾಗಿ ಅವರನ್ನು ಸ್ವತಂತ್ರರು ಎಂದು ಪರಿಗಣಿಸಿ ಅವರಿಗೆ ಇಲ್ಲಿ ಬೇರೆ ಬೇರೆ ಸೀಟುಗಳನ್ನು ಅಲಾಟ್ ಮಾಡಿಸಬೇಕೆಂದು ಈ ಸದನದ ಮೂಲಕ ಅರಿಕೆ ಮಾಡಿಕೊಳ್ಳತ್ತಿದ್ದೇನೆ.

ಶ್ರೀ ಕೆಂಗೇಗೌಡ.—ಸ್ವಾಮಿ, ಈ ವಿಚಾರದಲ್ಲಿ ನಾನೂ ಕೂಡ ಒಂದು ಕಾಗದವನ್ನು ತಮಗೆ ಬರೆದಿದ್ದೇನೆ.

ಅಧ್ಯಕ್ಷರು.—ತಾವು ನನಗೆ ಕಾಗದವನ್ನು ಬರೆದಿದ್ದೀರಿ. ಅದನ್ನು ನಾನು ಓದಿದ್ದೇನೆ.

ಶ್ರೀ ಕೆಂಗೇಗೌಡ.—ಮಾನ್ಯ ಅಧ್ಯಕ್ಷರೇ, ಚುನಾವಣಾ ಆಯೋಗದವರು ಕಾಂಗ್ರೆಸ್ (ಯು) ಪಕ್ಷವನ್ನು ರಾಜಕೀಯ ಪಕ್ಷಗಳ ಪಟ್ಟಿಯಿಂದ ತೆಗೆದಿರತಕ್ಕಂಥ ವಿಚಾರ ಪೇಪರ್‌ನಲ್ಲಿ ವರದಿಯಾಗಿದೆ.